# ನಗೆ ಹೊನಲು






ಯೋಗ ಕ್ಲಾಸ್‌ನಲ್ಲಿ ಓಗದಿಂದ ಆದ ಲಾಭದ ಬಗ್ಗೆ ಹೇಳಿ ಅಂತ ಗುರುಗಳು ಕೇಳಿದರು.

ಒಬ್ಬ ನನಗೆ ಪ್ರಾಣಾಯಾಮ ಮಾಡುವುದರಿಂದ ನೆಗಡಿ. ಅರೆದಲೆಶೂಲೇ ಕಡಿಮೆ ಆಗಿದೆ ಎಂದ.

ಇನ್ನೊಬ್ಬ ದಿನಾ ಉಗುರು ಉಜ್ಜುವುದರಿಂದ ನನ್ನ ತಲೆ ಕೂದಲು ಕಪ್ಪಾಗಿವೆ ಎಂದ.

ಕಪಾಲಭಾತಿ ಮಾಡುವುದರಿಂದ ನನ್ನ ಹೊಟ್ಟೆ ನೋವು ಕಡಿಮೆಯಾಗಿದೆ ಎಂದ ಮತ್ತೊಬ್ಬ.

ನಾನು ಶಿರ್ಷಾಸನ ಮಾಡಿದ ಎರಡೇ ನಿಮಿಷಕ್ಕೆ ನಲವತ್ತು ಸಾವಿರ ರೂಪಾಯಿ ಲಾಭವಾಗಿದೆ ಎಂದ ಗುಂಡ.

ಅದು ಹೇಗೆ? ಎಂದು ಗುರುಗಳು ಕೇಳಿದರು.

ಮೂರು ದಿನದಿಂದ ನನ್ನ ಉಂಗುರ ಹುಡುಕಿದರೂ ಸಿಗದೆ ಇದ್ದದ್ದು ಶಿರ್ಷಾಸನ ಮಾಡಿದಾಗ ಅಲ್ಮೆರಾ ಕೆಳಗೆ ಇರುವುದು ಗೊತ್ತಾಯಿತು ಎಂದು ಗುಂಡ ಉತ್ತರಿಸಿದ.

ಗುಂಡ: ರಾತ್ರಿ ಲೇಟಾಗಿ ಹೋಗಿದ್ದಕ್ಕೆ ನನ್ನ ಹೆಂಡತಿ ಬಾಗಿಲು ತೆರೆಯಲಿಲ್ಲ.

ಸುಬ್ಬ: ಮತ್ತೆ ಬೆಳಗಾದ ಮೇಲಾದರೂ ತೆಗೆದಳಾ?

ಗುಂಡ: ಅಷ್ಟು ಹೊತ್ತಿಗೆ ನಿಶೆ ಇಳಿದಿತ್ತು. ನನಗೆ ಮದುವೆಯೇ ಆಗಿಲ್ಲ ಅಂತ ಗೊತ್ತಾಯಿತು. ಕೀ ನನ್ನ ಜೇಬಲ್ಲೇಇತ್ತು.

***

ಸೋಮ: ನನ್ನ ಮೊದಲ ಹೆಂಡತಿ ದೇವತೆ ಕಣೋ ದೇವತೆ ಎಂದ.

ಭೀಮ: ಆಕೆ ದೇವತೆ ಅಂತೀಯಾ ಮತ್ತೆ ಡೈವ್ರೂರ್ಸ್ ಕೊಟ್ಟು, ಎರಡನೇ ಮದುವೆ ಏಕೆ ಆದೆ ಎಂದ.

ಸೋಮ: ಎರಡನೆಯವಳು ಬಂದ ಮೇಲೆ ತಾನೇ ಗೊತ್ತಾಗಿದ್ದು ಮೊದಲ ಹೆಂಡತಿ ದೇವತೆ ಅಂತ.

***

ಗಂಡ: ಅಡುಗೆ ನಿಮ್ಮಮ್ಮ ಮಾಡಿದ್ದಾ? ಎಂದ.

ಹೆಂಡತಿ: ಹೌದು ರ್ರೀ ನಿಮಗೆ ಹೇಗೆ ಗೊತ್ತಾಯಿತು? ಎಂದಳು.

ಗಂಡ: ಏನಿಲ್ಲ. ಪಲ್ಯದಲ್ಲಿ ಬಿಳಿ ಕೂದಲು ಸಿಕ್ತು ಅದಕ್ಕೆ ಎಂದ.

***

ಸೊಸೆ: ಅತ್ತೆ ನಾನು ಕಪ್ಪು ಇದ್ದೀನಾ

ಅತ್ತೆ: ಇಲ್ಲಮ್ಮ.

ಸೊಸೆ: ದಪ್ಪ ಇದ್ದಿನಾ? ಮೂತಿ ಸೊಟ್ಟ ಇದೇಯಾ?

ಅತ್ತೆ: ಇಲ್ಲಮ್ಮಾ.

ಸೊಸೆ: ಗಯ್ಯಾಳಿ ತರಹ ಮಾತಾಡ್ತಿನಾ?

ಅತ್ತೆ: ಅಯ್ಯೋ ಇಲ್ಲಾ.. ಯಾರಂದ್ರು ಹಾಗಂತ?

ಸೊಸೆ: ಮತ್ತೆ ಪಕ್ಕದ ಮನೆ ಪಂಕಜಮ್ಮ ನೀನು ನಿನ್ನ ಅತ್ತೆ ಥರಾನೆ ಇದ್ದಿ ಅಂತ ಹೇಳ್ತಾರೆ.

***

ಹೆಂಡತಿ: ರ್ರೀ ದ್ವೇಷಕ್ಕೂ ಸಂತೋಷಕ್ಕೂ ಇರುವ ವ್ಯತಾಸ ಏನ್ರೀ?

ಗಂಡ: ನಾನು ನಿನ್ನ ಎತ್ತಿ ಬಾವಿಗೆ ಹಾಕಿದರೆ ದ್ವೇಷ ನೀನೇ ಹೋಗಿ ಬಾವಿಗೆ ಬಿದ್ದರೆ ಸಂತೋಷ.

***

ಗಂಡ: ಅಯ್ಯೋ ಹಾಳಾದ್ದು ಯಾಕೋ ನಿದ್ದೆನೇ ಬರುತ್ತಾ ಇಲ್ಲ ಕಣೇ

ಹೆಂಡತಿ: ಹೌದಾ? ಹಾಗಿದ್ರೆ ಸಿಂಕಿನಲ್ಲಿ ಪಾತ್ರೆಗಳು ಬಿದ್ದಿವೆ ತೊಳೆಯಿರಿ

ಗಂಡ: ಅಯ್ಯೋ ನಿನ್ನಾ ನಾನು ನಿದ್ದೆಯಲ್ಲಿ ಮಾತಾಡ್ತಾ ಇದ್ದೇನೆ ಕಣೇ ಎಂದ.

***

ಬ್ಯಾಂಕ್ ಮಾನೇಜರ್ ನಿಮ್ಮ ಪಾನ್ ವಿವರ ತಿಳಿಸಿ ಎಂದ.

ಅದಕ್ಕೆ ಗುಂಡ ಎರಡು ಮೈಸೂರು ಎಲೆ, ಸ್ವಲ್ಪ ಸುಣ್ಣ, ಮೂರು ಚೂರು ಅಡಿಕೆ, ಸ್ವಲ್ಪ ಲವಂಗ ಒಂದು ಏಲಕ್ಕಿ, ಬೇಕೆಂದರೆ ಚೂರು ಒಣಕೊಬ್ಬರಿ ಇಷ್ಟೇ ಸಾರ್ ಎಂದ.

***

ಹೆಂಡತಿ ಬೆಳಿಗ್ಗೆ ಎದ್ದ ಕೂಡಲೇ ಅಲಂಕಾರ ಮಾಡಿಕೊಳ್ಳಲು ಶುರು ಮಾಡಿದಳು.

ಗಂಡ ಯಾಕೇ ಇಷ್ಟು ಬೆಳಿಗ್ಗೆ ಬೆಳಿಗ್ಗೆ ಅಲಂಕಾರ ಮಾಡಿಕೊಳ್ಳುತ್ತಿದ್ದೀಯಾ ಎಂದು ಕೇಳಿದ.

ಅದಕ್ಕೆ ಹೆಂಡತಿ ಅಯ್ಯೋ ನನ್ನ ಫೋನ್ ಲಾಕ್ ಓಪನ್ ಮಾಡಬೇಕು ಅದು ನನ್ನ ಮುಖ ಗುರುತು ಹಿಡಿತಿಲ್ಲ ಅದಕ್ಕೆ ಎಂದಳು.

***

ಡಾಕ್ಟರ್: ನಿಮಗೆ ಯಾವಾಗಲಾದರೂ ನ್ಯೂಮೋನಿಯಾ ದಿಂದ ತೊಂದರೆ ಆಗಿತ್ತಾ?

ಗುಂಡ: ಹಾ ಒಮ್ಮೆ ಆಗಿತ್ತು.

ಡಾಕ್ಟರ್: ನಾನು ಸ್ಕೂಲಿನಲ್ಲಿ ಇದ್ದಾಗ ಮೇಷ್ಟ್ರು ಇಂಗ್ಲಿಷ್‌ನಲ್ಲಿ ನ್ಯೂಮೋನಿಯಾ ಪದದ ಸ್ಪೇಲಿಂಗ್ ಕೇಳಿದಾಗ.

***

ಟೀಚರ್: ಯಾರಿಗಾದರೂ ಏನಾದರೂ ಡೌಟ್ ಇದ್ರೆ ಕೇಳಿ.

ಗುಂಡ: ಮೇಡಂ ಇವತ್ತು ಪ್ರಿಯಾಂಕಾ ಯಾಕೇ ಬಂದಿಲ್ಲ

***

ನಳಿನಾಕ್ಷಿ: ನಮ್ಮೆಜಮಾನ್ರು ಈಗೆಲ್ಲಾ ಕುಡಿಯುವದನ್ನು ಹಂತ ಹಂತವಾಗಿ ನಿಲ್ಲಿಸಿದ್ದಾರೆ.

ಜಲಜಾಕ್ಷಿ: ತುಂಬ ಸಂತೋಷ ಕಣೇ ಸದ್ಯ ನಿಲ್ಲಿಸಿದ್ದಾರಲ್ಲ.

ನಳಿನಾಕ್ಷಿ: ಅಯ್ಯೋ ರಾಮ ನಿನಗೆ ಅರ್ಥ ವಾಗಲಿಲ್ಲವೆ ಬನಶಂಕರಿ ಒಂದನೇ ಹಂತ, ಎರಡನೇ ಹಂತದಲ್ಲಿ ಈಗ ಕುಡಿಯುತ್ತಿಲ್ಲ. ಬರೀ ಮೂರನೇ ಹಂತದಲ್ಲಿ ಮಾತ್ರ ಕುಡಿಯಲು ಹೋಗ್ತಾರೆ.

ಸಂಗ್ರಹ: ಶರದ ಕುಲಕರ್ಣಿ


SANDHILIN सन्धिलिन
ಸಂಧಿಲಿನ್

ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ
ಹೇಳಿ!

ಶೀಘ್ರ ಪರಿಣಾಮಕಾರಿ



• ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
• ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
• 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
• ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ